# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **117** |
| ಸದಸ್ಯರ ಹೆಸರು | : | **ಶ್ರೀ ಹೆಚ್.ಎಸ್.ಗೋಪಿನಾಥ್** |
| ಉತ್ತರಿಸಬೇಕಾದ ದಿನಾಂಕ | : | **11-08-2025** |
| ಉತ್ತರಿಸುವ ಸಚಿವರು | : | **ಮಾನ್ಯ ಇಂಧನ ಸಚಿವರು** |

***

| | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಲ್ಲಿ ಸ್ಮಾರ್ಟ್ ಮೀಟರ್ ಗಳನ್ನು ಅಳವಡಿಕೆಯಲ್ಲಿ ಲೋಪದೋಷಗಳು ಕಂಡು ಬಂದಿವೆಯೇ; ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು; ಅಳವಡಿಕೆ ಯಾವ ಹಂತದಲ್ಲಿದೆ; ಸದರಿ ಮೀಟರ್ ಗಳಿಂದ ಗ್ರಾಹಕರಿಗೆ ಆಗುವ ಪ್ರಯೋಜನವೇನು; | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿನ ಬೆಂಗಳೂರು ನಗರದಲ್ಲಿ ಸ್ಮಾರ್ಟ್‌ಮೀಟರ್ ಅಳವಡಿಕೆಯಲ್ಲಿ ಯಾವುದೇ ಲೋಪದೋಷಗಳು ಕಂಡು ಬಂದಿರುವುದಿಲ್ಲ.<br><br>ಸದರಿ ಸ್ಮಾರ್ಟ್ ಮೀಟರ್‌ಗಳು, ಬೆ.ವಿ.ಕಂ ನ AMI Software ಜೊತೆಗೆ ಯಶಸ್ವಿಯಾಗಿ ಸಂವಹಿಸುತ್ತಿರುತ್ತದೆ.<br><br>ಬೆಂಗಳೂರು ನಗರದಲ್ಲಿ ದಿನಾಂಕ 05.08.2025 ರಂತೆ 17,812 ಸಂಖ್ಯೆ ಸ್ಮಾರ್ಟ್‌ಮೀಟರ್‌ಗಳನ್ನು ಅಳವಡಿಸಲಾಗಿದೆ.<br><br>ಸ್ಮಾರ್ಟ್ ಮೀಟರ್‌ಗಳಿಂದ ಗ್ರಾಹಕರಿಗೆ ಆಗುವ ಪ್ರಯೋಜನಗಳು ಕೆಳಕಂಡಂತಿವೆ:<br><br>1. ಮಾಹಿತಿ ತಂತ್ರಜ್ಞಾನದ ಗುಣಮಟ್ಟದ ಸೇವೆಯನ್ನು ಒದಗಿಸಲು ಸಹಕಾರಿಯಾಗುತ್ತದೆ.<br>2. ಸ್ಮಾರ್ಟ್ ಮೀಟರ್ ಅನ್ನು ಅಳವಡಿಸಿಕೊಂಡಿರುವ ಗ್ರಾಹಕರಿಗೆ, ಮಾಸಿಕ ಬಿಲ್ಲನ್ನು ಮೊಬೈಲ್ ಆಪ್ ಮುಖಾಂತರ ನೀಡಲಾಗುತ್ತದೆ. ಕಾಗದ ರಹಿತ ಬಿಲ್ಲಿಂಗ್ ನೊಂದಿಗೆ ಪರಿಸರಸ್ನೇಹಿ ಹೆಜ್ಜೆಯತ್ತ ಗ್ರಾಹಕರು ಮುನ್ನಡೆಯಬಹುದು.<br>3. ನೈಜ ಸಮಯದ ವಿದ್ಯುತ್ ಬಳಕೆಯ ಟ್ರಾಕಿಂಗ್ ಮಾಡಬಹುದು.<br>4. ಪ್ರೀ-ಪೇಯ್ಡ್ ಬಿಲ್ಲಿಂಗ್ ಆಯ್ಕೆ ಲಭ್ಯವಿರುವುದರಿಂದ, ವ್ಯತ್ಯಯ ರಹಿತ ವಿದ್ಯುತ್ ಸರಬರಾಜು ಪಡೆಯಲು, ಗ್ರಾಹಕರು ತಮ್ಮ ಬಳಕೆಯ ಅನುಸಾರವಾಗಿ ಮುಂಗಡ ಹಣ ಪಾವತಿಸಬಹುದು.<br>5. ಸ್ಮಾರ್ಟ್ ಮೀಟರನ್ನು ಯಾವುದೇ ಸಮಯದಲ್ಲೂ ರೀಚಾರ್ಜ್ ಮಾಡಬಹುದು.<br>6. ಸ್ಮಾರ್ಟ್ ಮೀಟರ್ ಅಳವಡಿಕೆಯ ಮೂಲಕ ಇಂಧನ ದಕ್ಷತೆಯನ್ನು ಕಾಪಾಡಬಹುದು. |

<table>
<tr>
<td>ಆ)</td>
<td>ಬೆಂಗಳೂರಿನಲ್ಲಿ ಅಕ್ರಮ ವಿದ್ಯುತ್ (Power Theft) ಪ್ರಮಾಣ ಎಷ್ಟು; ಇದಕ್ಕೆ ಬೆಸ್ಕಾಂ ಕೈಗೊಂಡ ಕ್ರಮಗಳೇನು; ಯಾವ ತಂತ್ರಜ್ಞಾನ ಬಳಸಿ ತಡೆಗಟ್ಟಲಾಗುತ್ತಿದೆ;</td>
<td>
ಬೆಂಗಳೂರಿನಲ್ಲಿ ದಾಖಲಾದ ವಿದ್ಯುತ್ ಕಳ್ಳತನ ಪ್ರಕರಣಗಳ ಸಂಖ್ಯೆ ಮತ್ತು ಅಕ್ರಮ ವಿದ್ಯುತ್ (Power Theft) ಪ್ರಮಾಣದ ವರ್ಷಾವಾರು ವಿವರಗಳು ಕೆಳಕಂಡಂತಿವೆ:
<table>
<tr><th>ಆರ್ಥಿಕ ವರ್ಷ</th><th>ದಾಖಲಾದ ಕಳ್ಳತನದ ಪ್ರಕರಣಗಳ ಸಂಖ್ಯೆ</th><th>ಅಕ್ರಮ ವಿದ್ಯುತ್ ಪ್ರಮಾಣ (ಮಿ. ಯೂ)</th><th>ಬೇಡಿಕೆ (ರೂ. ಕೋಟಿಗಳಲ್ಲಿ)</th><th>ಮುಕ್ತಾಯವಾದ ಪ್ರಕರಣಗಳ ಸಂಖ್ಯೆ</th><th>ವಸೂಲಾದ ದಂಡದ ಮೊತ್ತ ರೂ. ಕೋಟಿಗಳಲ್ಲಿ)</th></tr>
<tr><td>2022-23</td><td>1255</td><td>2.46</td><td>8.57</td><td>1198</td><td>4.36</td></tr>
<tr><td>2023-24</td><td>1313</td><td>2.50</td><td>9.32</td><td>1258</td><td>5.34</td></tr>
<tr><td>2024-25</td><td>1450</td><td>2.54</td><td>10.11</td><td>1427</td><td>6.46</td></tr>
<tr><td>2025-26 (30.06.2025 ರವರೆಗೆ)</td><td>375</td><td>0.86</td><td>2.85</td><td>344</td><td>1.34</td></tr>
</table>
ಬೆಂಗಳೂರು ನಗರದಲ್ಲಿ ಅಕ್ರಮ ವಿದ್ಯುತ್ (Power theft) ತಡೆಯಲು ಬೆಸ್ಕಾಂವತಿಯಿಂದ ಕೈಗೊಂಡ ಕ್ರಮಗಳು ಕೆಳಕಂಡಂತಿವೆ:.
<ol>
<li>ತಪಾಸಣೆ ನಡೆಸುವಾಗ ವಿದ್ಯುತ್ ಕಳ್ಳತನ ಪ್ರಕರಣಗಳು ಕಂಡು ಬಂದಲ್ಲಿ ವಿದ್ಯುತ್ ಕಾಯ್ದೆ 2003 ರ ಕಲಂ 135 ರ ಪ್ರಕಾರ ಕಾನೂನು ಕ್ರಮ ತೆಗೆದುಕೊಳ್ಳಲಾಗುತ್ತಿದೆ.</li>
<li>ಪ್ರತಿ ಮಾಹೆಯಲ್ಲಿ ಸ್ಥಾವರ ತಪಾಸಣೆಗಾಗಿ ಕ್ರಿಯಾ/ಕಾರ್ಯ ಯೋಜನೆ ನೀಡಲಾಗುತ್ತದೆ.</li>
<li>ಪ್ರತಿ ವಾರದಲ್ಲಿ 3 ದಿನಗಳು ಸ್ಥಾವರ ತಪಾಸಣೆಯನ್ನು ಕಡ್ಡಾಯ ಮಾಡಲಾಗಿದೆ.</li>
<li>ಬೆಸ್ಕಾಂ ಜಾಗೃತದಳವು ಪ್ರತಿ ವರ್ಷ ಶಾಲೆ, ಸಾರ್ವಜನಿಕ ಜನನಿಬಿಡ ಪ್ರದೇಶಗಳಲ್ಲಿ ವಿದ್ಯುತ್ ಕಳ್ಳತನದ ಬಗ್ಗೆ ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡು ಜಾಗೃತಿ ಮೂಡಿಸಲಾಗುತ್ತದೆ.</li>
<li>ಹೆಲ್ಪ್ ಲೈನ್ ನಂ. 1912 /ಇ-ಮೇಲ್ /ಫೋನ್ ಗಳ ಮೂಲಕ ಬೆಸ್ಕಾಂ ಜಾಗೃತದಳದ ಅಧಿಕಾರಿಗಳು ವಿದ್ಯುತ್ ಕಳ್ಳತನದ ಬಗ್ಗೆ ಜನ ಸಾಮನ್ಯರಿಂದ ಮಾಹಿತಿ ಪಡೆದು ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುತ್ತಿದೆ.</li>
</ol>
ಸ್ಮಾರ್ಟ್ ಮೀಟರ್ ಅಳವಡಿಕೆಯ ಮೂಲಕ ಅಕ್ರಮ ವಿದ್ಯುತ್ ಬಳಕೆಯನ್ನು ಪತ್ತೆ ಹಚ್ಚಬಹುದಾಗಿದೆ.
</td>
</tr>
<tr>
<td>ಇ)</td>
<td>ಬೆಸ್ಕಾಂ ಸಂಸ್ಥೆಯ ಪ್ರಸ್ತುತ ಹಣಕಾಸು ಸ್ಥಿತಿ ಏನು; ವಿದ್ಯುತ್ ಉತ್ಪಾದಕ ಸಂಸ್ಥೆಗಳಿಗೆ (ಕೆಪಿಸಿಎಲ್) ಬಾಕಿ ಉಳಿಸಿರುವ ಹಣವೆಷ್ಟು;</td>
<td>
ಬೆ.ವಿ.ಕಂಪನಿಯ 2022-23 ಮತ್ತು 2023-24ನೇ ವರ್ಷಗಳಲ್ಲಿ ಪುಸ್ತಕ ಲಾಭ/ನಷ್ಟದ ವಿವರಗಳು ಈ ಕೆಳಕಂಡಂತಿರುತ್ತದೆ.
(ರೂ. ಕೋಟಿಗಳಲ್ಲಿ)
<table>
<tr><th>ಆರ್ಥಿಕ ವರ್ಷ</th><th>ಲಾಭ/ನಷ್ಟ</th><th>ಸಂಚಿತ ಲಾಭ /ನಷ್ಟ</th></tr>
<tr><td>2022-23</td><td>1767.49 ನಷ್ಟ</td><td>4479.94 ನಷ್ಟ</td></tr>
<tr><td>2023-24</td><td>3863.16 ನಷ್ಟ</td><td>8343.10 ನಷ್ಟ</td></tr>
</table>
</td>
</tr>
</table>

| | | |
|---|---|---|
| | | ದಿನಾಂಕ 30.6.2025 ರ ಅಂತ್ಯಕ್ಕೆ, ಬೆ.ವಿ.ಕಂಪನಿಯಿಂದ ಕೆ.ಪಿ.ಸಿ.ಎಲ್ ಗೆ ವಿದ್ಯುತ್ ಖರೀದಿಗೆ ಪಾವತಿಸಬೇಕಾದ ಬಾಕಿ ಮೊತ್ತ ರೂ. 5,230.49 ಕೋಟಿಗಳಾಗಿರುತ್ತದೆ. |
| ಈ) | ಪ್ರಸ್ತುತ ಮಳೆಗಾಲ ಸಮಯದಲ್ಲಿ ವಿದ್ಯುತ್ ಸ್ಥಗಿತ ನಿಭಾಯಿಸಲು ಯಾವ ಸಿದ್ಧತೆ ಮಾಡಲಾಗಿದೆ; ಮಾಡಿದ್ದಲ್ಲಿ, ಕೈಗೊಂಡ ಕ್ರಮಗಳೇನು; | 1. ರಾಜ್ಯಕ್ಕೆ ಮುಂಗಾರು ಅವಧಿಯಲ್ಲಿ ನೈಸರ್ಗಿಕ ವಿಕೋಪದಿಂದಾಗಿ ಮತ್ತು ವಾಡಿಕೆಗಿಂತ ಹೆಚ್ಚಿನ ಮಳೆ ಉಂಟಾದಲ್ಲಿ ಸಂಭವಿಸಬಹುದಾದ ದುಷ್ಪರಿಣಾಮಗಳನ್ನು ಸಮರ್ಥವಾಗಿ ಎದುರಿಸಲು ಹಾಗೂ ವಿದ್ಯುತ್ ಮೂಲಭೂತ ಸೌಕರ್ಯಗಳ ಹಾನಿಯನ್ನು ಕಡಿಮೆ ಮಾಡಲು, ಮುಂಗಾರು ಪೂರ್ವ ಸಿದ್ಧತೆ ಕ್ರಮಗಳನ್ನು ಪಾಲಿಸುವ ಸಲುವಾಗಿ, ತಡೆಗಟ್ಟುವ (preventive), ಹಾಗೂ ಪೂರ್ವ ಮುಂಗಾರು (pre-monsoon) ನಿರ್ವಹಣೆ ಕೈಗೊಳ್ಳಲಾಗುತ್ತಿದೆ.<br>2. ಆದರೂ ಪ್ರಕೃತಿ ವಿಕೋಪದ ಭಾರಿ ಮಳೆ ಗಾಳಿಯಿಂದಾಗಿ ಕೆಲವೊಮ್ಮೆ ವಿದ್ಯುತ್ ಕಂಬಗಳು ಉರುಳುವುದು ಮತ್ತು ವಿದ್ಯುತ್ ಮಾರ್ಗಗಳು ತುಂಡಾಗುವ ಸಾಧ್ಯತೆಗಳಿರುತ್ತವೆ. ಇಂತಹ ಸಂದರ್ಭಗಳಲ್ಲಿ ಹಾನಿಗೊಳಗಾದ ವಿದ್ಯುತ್ ಮೂಲಭೂತ ಸೌಕರ್ಯಗಳನ್ನು ಬದಲಾಯಿಸಿ /ಮರುಸ್ಥಾಪಿಸಿ, ವಿದ್ಯುತ್ ಸರಬರಾಜನ್ನು ತ್ವರಿತವಾಗಿ ಮರುಸ್ಥಾಪಿಸಲು ಕ್ಷೇತ್ರಾಧಿಕಾರಿಗಳಿಗೆ ವಿವಿಧ ಪೂರ್ವಭಾವಿ ಕ್ರಮಗಳನ್ನು ಪಾಲಿಸುವಂತೆ ಸೂಚಿಸಿ ಬೆ.ವಿ.ಕಂಪನಿ ವತಿಯಿಂದ ದಿನಾಂಕ: 25.03.2025 ರಂದು ಆದೇಶವನ್ನು ಮತ್ತು ದಿನಾಂಕ: 26.05.2025 ರಂದು ಸುತ್ತೋಲೆ ಹೊರಡಿಸಲಾಗಿದೆ.<br>3. ಮುಂದುವರೆದು, ಇಂಧನ ಇಲಾಖೆಯಿಂದ ಪೂರ್ವಭಾವಿಯಾಗಿ ಮುಂಗಾರು ಪೂರ್ವ ನಿರ್ವಹಣೆ ಯೋಜನೆಯನ್ನು (Pre Monsoon Contingency Plan) ಜಾರಿಗೊಳಿಸುವಂತೆ ದಿನಾಂಕ: 10.06.2025 ರಂದು ಸುತ್ತೋಲೆ ಹೊರಡಿಸಿದ್ದು, ಸದರಿ ಸೂತೋಲೆಯಲ್ಲಿ ಉಲ್ಲೇಖಿಸಿರುವ ಅಂಶಗಳನ್ನು / ಮಾರ್ಗದರ್ಶನವನ್ನು ಪಾಲಿಸುವಂತೆ ಕ್ಷೇತ್ರಾಧಿಕಾರಿಗಳಿಗೆ ಬೆವಿಕಂನಿಂದ ದಿನಾಂಕ: 02.07.2025ರ ಪತ್ರದನ್ವಯ ತಿಳಿಸಲಾಗಿದೆ.<br><br>ಮೇಲಿನ ಆದೇಶ/ಸುತೋಲೆಗಳನ್ವಯ, ಮಳೆಗಾಲ ಸಮಯದಲ್ಲಿ ವಿದ್ಯುತ್ ಸ್ಥಗಿತ ನಿಭಾಯಿಸಲು ಬೆ.ವಿ.ಕಂಪನಿ ವತಿಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:<br>• ಮುಂಗಾರು ಅವಧಿಯಲ್ಲಿ ತ್ವರಿತವಾಗಿ ವಿದ್ಯುತ್ ಸರಬರಾಜನ್ನು ಮರುಸ್ಥಾಪಿಸಲು ಕ್ಷೇತ್ರಾಧಿಕಾರಿಗಳಿಗೆ ಆವರ್ತನೀಯ ವಿಪತ್ತು ನಿಧಿ (revolving disaster fund) ನೀಡಲಾಗಿದೆ.<br>• ಅಗತ್ಯವಿರುವ ಕಡೆ ಗ್ಯಾಂಗ್ ಮೆನ್ ಗಳನ್ನು ತೊಡಗಿಸಿಕೊಳ್ಳಲಾಗಿದೆ. |

| | | |
|---|---|---|
| | | • ವಿತರಣಾ ಜಾಲದ ನಿರ್ವಹಣೆಗೆ ಬೇಕಾಗುವ ಅಗತ್ಯ ಸಾಮಗ್ರಿಗಳಾದ ವಿದ್ಯುತ್ ಕಂಬಗಳು, ಪರಿವರ್ತಕಗಳು, ವಾಹಕಗಳು ಹಾಗೂ ಇತರೆ ಸಾಮಗ್ರಿಗಳು ಸಾಕಷ್ಟು ಸಂಖ್ಯೆಯಲ್ಲಿ ಉಗ್ರಾಣದಲ್ಲಿ ದಾಸ್ತಾನು ಇಟ್ಟುಕೊಳ್ಳಲಾಗಿದೆ.<br><br>ಮೇಲಿನ ನಿಗದಿತ ಕಾರ್ಯವಿಧಾನದೊಂದಿಗೆ ಹಾನಿಗೊಳಗಾದ ವಿದ್ಯುತ್ ಮೂಲಭೂತ ಸೌಕರ್ಯಗಳನ್ನು ಬದಲಾಯಿಸುವ ಮೂಲಕ ವಿದ್ಯುತ್ ಸರಬರಾಜನ್ನು ಮರುಸ್ಥಾಪಿಸಲಾಗುತ್ತಿದೆ. |
| ಉ) | ಗ್ರೀನ್ ಸಿಟಿಯೋಜನೆಯಡಿಯಲ್ಲಿ ಬಯೋ ಗ್ಯಾಸ್, ವೆಸ್ಟ್-ಟು-ಎನರ್ಜಿ ಯೋಜನೆಗಳು ಯಾವ ಪ್ರದೇಶಗಳಲ್ಲಿ ಕಾರ್ಯರೂಪಕ್ಕೆ ಬಂದಿದೆ? (ಬಂದಿದ್ದಲ್ಲಿ, ವಿವರ ನೀಡುವುದು) | ಗ್ರೀನ್ ಸಿಟಿ ಯೋಜನೆಯಡಿಯಲ್ಲಿ ಬಯೋಗ್ಯಾಸ್, ವೇಸ್ಟ್-ಟು-ಎನರ್ಜಿ ಯೋಜನೆಗಳಿಗೆ ಬೆ.ವಿ.ಕಂಪನಿಯು ವಿದ್ಯುತ್ ಖರೀದಿ ಒಡಂಬಡಿಕೆಯನ್ನು ಮಾಡಿಕೊಂಡಿರುವುದಿಲ್ಲ. ಆದಾಗ್ಯೂ, ವೇಸ್ಟ್-ಟು-ಎನರ್ಜಿ ಯೋಜನೆಗಳಿಗೆ ಸಂಬಂಧಿಸಿದಂತೆ, ಕೆ.ಪಿ.ಸಿ.ಎಲ್/ ಅಭಿವರ್ದಕರೊಂದಿಗೆ ಮಾಡಿಕೊಂಡಿರುವ ವಿದ್ಯುತ್ ಖರೀದಿ ಒಡಂಬಡಿಕೆಯ ವಿವರವನ್ನು **ಅನುಬಂಧ**ದಲ್ಲಿ ಒದಗಿಸಿದೆ. |

ಸಂಖ್ಯೆ: ಎನರ್ಜಿ 167 ಇಬಿಎಸ್ 2025

(ಕೆ.ಜೆ.ಜಾರ್ಜ್)
ಇಂಧನ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಹೆಚ್.ಎಸ್.ಗೋಪಿನಾಥ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:117ಕ್ಕೆ ಅನುಬಂಧ:**

**ಬೆ.ವಿ.ಕಂಪನಿಯೊಂದಿಗೆ ಮಾಡಿಕೊಂಡಿರುವ ವೇಸ್ಟ್-ಟು-ಎನರ್ಜಿ ಯೋಜನೆಯ ವಿದ್ಯುತ್ ಖರೀದಿ ಒಡಂಬಡಿಕೆಯ ವಿವರಗಳು:**

| ಕ್ರ ಸಂ | ಉತ್ಪಾದಕರ ಹೆಸರು | ಸ್ಥಳ | ಸಾಮರ್ಥ್ಯ ಮೆ ವ್ಯಾ | ಪಿಪಿಎ ದಿನಾಂಕ | ವಿದ್ಯುತ್ ಖರೀದಿ ಒಡಂಬಡಿಕೆರನ್ವಯ ಪ್ರತಿ ಯೂನಿಟ್ ಜಕಾತಿ ದರ (ರೂ. ಗಳಲ್ಲಿ) | ಷರಾ |
|---|---|---|---|---|---|---|
| 1 | ಸಾತರೆಮ್ ಅಲ್ಟನೇಟಿವ್ ಫ್ಯೂಲ್ & ಎನರ್ಜಿ ಪ್ರೈ. ಲಿಮಿಟೆಡ್ | ಸ.ನಂ.85, ಕನ್ನಹಳ್ಳಿ , ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ, ಬೆಂಗಳೂರು | 14.5 | 15.09.2023 | 7.08 | ಚಾಲನೆಗೊಂಡಿರುವುದಿಲ್ಲ |
| 2 | ಎಂ.ಎಸ್. ಜಿಪಿ ಇನ್ ಫ್ರಾ ಟೆಕ್ ಪ್ರೈ.ಲಿ | ಚಿಗುರನಹಳ್ಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ | 11.59<br>(ರಫ್ತು ಮಾಡಬಹುದಾದ ಮೆ.ವ್ಯಾ -9.5 | 19.08.2023 | 7.08 | ಚಾಲನೆಗೊಂಡಿರುವುದಿಲ್ಲ |
| 3 | ಕೆ.ಪಿ.ಸಿ.ಎಲ್ ಗ್ಯಾಸ್ ಪವರ್ ಕಾರ್ಪೋರೇಷನ್ ಲಿಮಿಟೆಡ್ | ಬಿಡದಿ ಸೈಟ್, ಬಿಡದಿ, ರಾಮನಗರ | 11.5 | 25.10.2024 | 7.08 ಪ್ರಸ್ತುತ<br>(ಮಾನ್ಯ ಆಯೋಗ ನಿಗದಿಪಡಿಸುವ ದರದಲ್ಲಿ) | ಚಾಲನೆಗೊಂಡಿರುತ್ತದೆ |